Regd No M 1299 34 th Year ಶಾ 4—8—51

SATYAVADI



ಸ್ಥಾಪಕರು- ಆರಮನೆ ಸಿರಸ್ತೆದಾರ್ ಎನ್. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ರೈಲೆ ಮುಷ್ಕರ ಜರುಗದಂತೆ ಲಘು ಪ್ರಧಾನಿಗಳು ಪ್ರಾರ್ಥಿಸಲಿ !

ಭಾರತದ ಪ್ರಧಾನಿ ಪಂ|| ನೆಹರು, ಭಾರತ ಮತ್ತು ಪಾಕಿಸ್ತಾನ ಇವುಗಳ ಈಗಿನ ಬಿಕ್ಕಟ್ಟು ಪರಿಸ್ಥಿತಿಯಲ್ಲಿ ರೈಲ್ವೆ ಮುಷ್ಕರ ಮಾಡಕೂಡದೆಂದು ಬಹಿರಂಗ ಪ್ರಾರ್ಥನೆಯನ್ನು ಮಾಡಿದಲ್ಲಿ ಸಂಸನ್ನು ಮುಂದು ಹಾಕಲು ರೈಲ್ವೆ ಮಜೂರ ಸಂಘ ಸಿದ್ಧವಿದೆಯೆಂದು ಮುಖಂಡ ಶ್ರೀ ಜಯಪ್ರಕಾಶ ನಾರಾಯಣರು ಪಾಟ್ನಾದಲ್ಲಿ ಹೇಳಿದ್ದಾರೆ.

ನೆಹರು ಪತ್ರ ಉಪಯೋಗ್ವಿಲ್ಲ

ರೈಲ್ವೆ ಕೆಲಸಗಾರರ ಬೇಡಿಕೆ ಕುರಿತು ಜಯಪ್ರಕಾಶ್—ನೆಹರುವಿನಲ್ಲಿ ಪತ್ರ ವ್ಯವಹಾರ ಸಡೆಯುತ್ತಿದ್ದಿತಷ್ಟೆ. ಆ ಬಗೆಗೆ ಹೇಳಿಕೆಯೆತ್ತು-ಸೌಹಾರ್ದ ಒಪ್ಪರದದ ಆಶಯವಿಲ್ಲ ಮುಷ್ಕರ ಹೂಡುವುದು ಅನಿವಾರ್ಯ ಎಂದು ಶ್ರೀ ಜಯಪ್ರಕಾಶರು ಪಾಟ್ನಾದಲ್ಲಿ ತಿಳಿಸಿದ್ದಾರೆ.

ಮುದುಕನಿಗೆ ಶಿಕ್ಷೆ

ಕಾಶಿಯಲ್ಲಿ ಕಳ್ಳತನ ಮಾಡಿದ ಆರೋಪದ ಮೇಲೆ 72 ವರ್ಷದವನೊಬ್ಬನಿಗೆ ಒಂದು ವರ್ಷ ಸಶ್ರಮ ಸೆಜ ವಿಧಿಸಲಾಯಿತು. ಈ ಶಿಕ್ಷೆ ಅವನಿಗೇನೂ ಹೊಸದಲ್ಲ ಈಗಾಗಲೇ ಇಪ್ಪತ್ತು ಬಾರಿ ಅವನು ಶಿಕ್ಷೆ ಅನುಭವಿಸಿರುವನು

ಇತರರಿಗೂ ಅವಕಾಶ

ಸಂಯುಕ್ತ ಪ್ರಗತಿಪಕ್ಷದವರು ನಡೆಯುತ್ತಿರುವ ದೆಹಲಿ ಪೌರಸಭೆ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲಲು ಇತರರಿಗೂ ತಮ್ಮ ಪಕ್ಷದಲ್ಲಿ ಅವಕಾಶ ಕೊಡುವರು

ಗುಪ್ತ ಸಭೆ

ಭಾರತ-ಪಾಕ್‌ಗಳ ಬಾಂಧವ್ಯ ಕುರಿತು ಗಡಿನಾಡು ಪ್ರಾಂತ ಗವರ್ನರರಾದ ಮುಂದ್ರಿಗರದು ಮೂರು ಗುಡ್ಡನಾಡಿನ ಪ್ರತಿನಿಧಿಗಳನ್ನು ಮತ್ತು ಗಡಿನಾಡಿನ ಪ್ರಧಾನ ಕಾರ್ಯದರ್ಶಿಗಳೊಡನೆ ಗುಪ್ತ ಮಹತ್ವೋಚನೆ ನಡೆಸುವರು.

ಪೋರ್ಜರಿಗೆ ಶಿಕ್ಷೆ

ಉತ್ತರ ಪ್ರದೇಶದ ಓರ್ವ ತರುಣನು ಅಲ್ಲಿನ ವಿದ್ಯಾ ಸಚಿವ ಶ್ರೀ ಸಂಪೂರ್ಣಾನಂದರು ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ತಾಂಡನ್ನರು ಇವರ ರುಜುವನ್ನು ಪೋರ್ಜರಿ ಮಾಡಿ ಅನೇಕ ಗಿರಣಿಯವರಿಂದ ಸಹಸ್ರಾರು ರೂ ವಸೂಲ್ಮಾಡಿದ ಆರೋಪದ ಮೇಲೆ ನಾಲ್ಕು ವರ್ಷ ಸಶ್ರಮ ಸಜ ವಿಧಿಸಲಾದ ವಂದಿ ಕಾಶಿಯಿಂದ ಬಂದಿದೆ.

ಪ್ರಭುಗಳ ಮೆರವಣಿಗೆ

ತುಮಕೂರಿನಲ್ಲಿ ಶ್ರೀಮನ್ಮಹಾರಾಜರಿಗೆ 10 ನೇ ತಾ|| ಮಾನಪತ್ರವನ್ನು ಪೌರಸಭೆ ಅರ್ಪಿಸುವದು. ಪ್ರಭುಗಳ ಮೆರವಣಿಗೆ ಏರ್ಪಾಟಾಗಿದೆ.

ಉಪ ಚುನಾವಣೆ

ಮೈಸೂರು ಲೆಜಿಸ್ಲೇಟೀವ್ ಅಸೆಂಬ್ಲಿಗೆ ಬೆಂಗಳೂರಿನಿಂದ ಒಂದು ಸ್ಥಾನಕ್ಕೆ ಮುಂದಿನ ತಿಂಗಳು 9 ನೇ ತಾ|| ಚುನಾವಣೆ ನಡೆಯುವದು.

ಹಿಂದೂಕೋಡ್ ಮಸೂದೆಯನ್ನು ಅಂಗೀಕರಿಸಲಾಗುವುದೇ ?

ಐದು ವರ್ಷ ಹಳೆಯದಾದ ಹಿಂದೂಧರ್ಮಶಾಸ್ತ್ರ ಕ್ರೋಢೀಕರಣ ಮಸೂದೆಯನ್ನು ಇದೇ ಸೋಮವಾರ ಸ್ವಾರಂಭವಾಗಲಿರುವ ಪಾರ್ಲಿಮೆಂಟ ಅಧಿವೇಶನದಲ್ಲಿ ಚರ್ಚಿಸುವದಕ್ಕೆಂದು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಾಗುತ್ತದೆ ಈಗಿನ ಪಾರ್ಲಿಮೆಂಟು ಎಸೆಂಬ್ಲಿಸುವ ವೇಳೆಯಲ್ಲೇ ವಾದಗ್ರಸ್ತವಾದ ಈ ಮಸೂದೆಯನ್ನು ಅಂಗೀಕರಿಸಬೇಕೆಂಬ ಉದ್ದೇಶವಿದ್ದಂತೆ ತೋರುತ್ತದೆ.

— ತಿರುವನ್ನವೆಲ್ಲಿಯಲ್ಲಿ ತಿರುವಾಂಕೂರ ಸಭೆ ನಡೆದು ಹಿಂದೂಕೋಡು ಮಸೂದೆಯನ್ನು ವಿರೋಧಿಸಲಾಯಿತು.

ಐದು ರೂ. ಗೆ ಮಗು ಮಾರಾಟ!

ನೆಲ್ಲೂರಿನ ಸ್ಮಾರ್ತ ಬ್ರಾಹ್ಮಣ್ಯ ನಾದಿನ ಪತ್ನಿ ಮುರುಕಾಯಿ ಎಂಬವಳು ತನ್ನ 5 ತಿಂಗಳ ಹೆಣ್ಣು ಮಗುವನ್ನು ಕದೀರ್ ಷೇಕ್ ಎಂಬವರಿಗೆ, ಇತರ 4 ಮಕ್ಕಳ ತಿಂಡಿಗಾಗಿ ರೂ. 5 ಕ್ಕೆ ಮಾರಿದಳೆಂದು ದೇವಕೊಟ್ಟಾಲ್ ವಾರ್ತೆ.

ಖಾನ್ ಸಾಹೇಬ ಚುನಾವಣೆಗೆ

ಈಗ ಸ್ಥಾನಬದ್ಧತೆಯಲ್ಲಿರುವ ಗಡಿನಾಡು ಪ್ರಾಂತದ ಹಿಂದಿನ ಮುಖ್ಯ ಮಂತ್ರಿಗಳಾದ ಡಾ|| ಖಾನ್‌ಸಾಹೇಬರು ಮುಂಬರುವ ಸಾರ್ವತ್ರಿಕ ಚುನಾವಣೆಗೆ ಆ ಪ್ರಾಂತದಲ್ಲಿ ಶಾಸ್ತ್ರ ಮತದಾರ ಸಂಘದಿಂದ ನಿಲ್ಲಲು ನಿರ್ಧರಿಸಿರುವರೆಂದು ಲಾಹೋರ್ ವಾರ್ತೆ.

ನೋಟು ಮೂರಾಟ ಮಾಡಿದವರ ದಸ್ತಗಿರಿ

ಮೊನ್ನೆ ಸಾಯಂಕಾಲ ಬೊಂಬಾಯಿ ನಲ್ಲಿ 3 ಮಂದಿ ಬಂಧಿಸಲ್ಪಟ್ಟರು. ಅವರು 1 ಸಾವಿರ ರೂ. ಮೌಲ್ಯದ 80 ನೋಟುಗಳನ್ನು ರೂ. 220 ಕ್ಕೆ ಒಂದರಂತೆ ಮಾರುತ್ತಿದ್ದರು

— ಪ್ರಜಾಪಕ್ಷದ ಅಧ್ಯಕ್ಷರಾದ ಡಾ|| ಶಾಂ ಪ್ರಸಾದ ಮುಖರ್ಜಿ ಕಲ್ಕತ್ತಾದಲ್ಲಿ ಹೇಳಿಕೆ ಇತ್ತು ಪಾಕಿಸ್ತಾನದ ಮೇಲೆ ಹಣಕಾಸಿನ ಧಿಗ್ಬಂಧ ವಿಧಿಸಲು ಸೂಚಿಸಿದ್ದಾರೆ ಆಗ ಸಮರ ಸೊಲ್ಲು ಅಡಗುವೆದಂತೆ.

— ಕರ್ನಾಟಕದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ತಂಡಕ ಇದೇ ತಾ| 17 ರಿಂದ 21 ರ ಪ್ರವಾಸ ಮಾಡುವರು.

— ಒಂದು ಲಕ್ಷ ರೂ. ವೆಚ್ಚದಲ್ಲಿ ಭಾರತ ಪಾರ್ಲಿಮೆಂಟು ಭವನದಲ್ಲಿ ಹೊಸ ಧ್ವನಿವರ್ಧಕ ಯಂತ್ರ ಹಾಕಿಸಲಾಗಿದೆ.

ಮೈಸೂರು ಸಂಸ್ಥಾನದ ನೀರಾವರಿ ಅಭಿವೃದ್ಧಿಯ ವಿಶೇಷ ಪ್ರಧಾನ ಇಂಜಿನಿಯರಾಗಿ ಶ್ರೀ ಡಿ. ಎಸ್. ವೆಂಕಣ್ಣನವರನ್ನು ನೇಮಕ ಮಾಡಲಾಗಿದೆ.

ಶ್ರೀಮನ್ಮಹಾರಾಜರು 14 ನೇ ತಾ| ಮಂಡ್ಯಕ್ಕೆ ಭೇಟಿ ಕೊಡುವರು

ಮುಂದಿನ ಮೂರು ತಿಂಗಳಿನಲ್ಲಿ 22 ಕೋಟಿ ಗಜಗಳಿಗೆ ಮಿಲ್ ಬಟ್ಟೆಯನ್ನು ಹೊರಗೆ ಕಳಿಸಕೂಡದೆಂದು ಸರ್ಕಾರಕ್ಕೆ ಜವಳಿ ನಿಯಂತ್ರಣ ಸಮಿತಿ ನಿರ್ಧರಿಸಿರುವದಾಗಿ ಬೊಂಬಾಯಿ ವಾರ್ತೆ.

ರಂಟಿ ಮತ್ತು ತ್ರಿವರ್ಣ ಕಾಂಗ್ರೆಸ್ ಧ್ವಜ ಇವುಗಳನ್ನು ಕಾಂಗ್ರೆಸ್ ಪಕ್ಷವು ತನ್ನ ಚುನಾವಣೆ ಚಿಹ್ನೆಗಳನ್ನಾಗಿ ಆರಿಸಿಕೊಂಡಿದ್ದಕ್ಕಾಗಿ ಸಮಾಜವಾದಿ ಪಕ್ಷ ಆಕ್ಷೇಪಮೆತ್ತಿರುವದಾಗಿ ದೆಹಲಿಯಿಂದ ತಿಳಿದುಬಂದಿದೆ.

ಗೋವಾ ಚಳವಳಿಗೆ ಬೆಂಬಲ

ಗೋವಾ ಸಂಯುಕ್ತ ರಂಗದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಾಮನ ದೇಸಾಯರು ಪ್ರಜಾಪಕ್ಷದ ಧುರೀಣರಾದ ಆಚಾರ್ಯ ಕೃಪಾಲಿನಿಯವರನ್ನು ಬೊಂಬಾಯಿ ನಲ್ಲಿ ಕಂಡರು. ಗೋವೆಯು ನಿಃಸಂಶಯವಾಗಿಯೂ ಹಿಂದೀ ಒಕ್ಕೂಟದ ಅಂಗವೆಂದೂ ಪೋರ್ತುಗೀರಿಗೆ ಅಲ್ಲಿರುವ ಅಧಿಕಾರವಿಲ್ಲವೆಂದೂ ಆಚಾರ್ಯ ಕೃಪಲಾನಿಯವರು ತಿಳಿಸಿದರು. ಗೋವಾ ಜನತೆ ಮತ್ತು ಅವರ ಹೋರಾಟದ ಒಗೆಗೆ ತಮ್ಮ ಪಕ್ಷದ ಸಹಾನುಭೂತಿಯಿದೆಯೆಂದು ತಿಳಿಸಿದರು.

ಮೈಸೂರು ಪೌರಸಭೆಯ ಮುಂದು ವರಿದ ಅಧಿವೇಶನ ನಾಡಿದ್ದು ಮಧ್ಯಾಹ್ನ 4 ಗಂಟೆಗೆ ಸನ್ನಾನೇತವಾಗುತ್ತದೆ.

ಭೂಮಾತೆ, ಗೋಮಾತೆ, ಗಂಗಾಮಾತೆ

(.ವ..ಂದ ವರದು.ು)

ಬ್ರಿಟಿಷ್ ರಾಯಲ್ ಸೊಸೈಟಿ ಸದ್ಯನಾದ ಡಾ || ನೆ.್ಸ್ಕಿಂವರು ಗಂಗೆ ಯನ್ನು ಕುರಿತ್ , ಸ್ವಾನುಭವವನ್ನು ಪ್ರಪಂಚಕ್ಕೆ ಹೀಗೆ ತಿಳಿಸಿರುವರು—

ಕಲ್ಕತ್ತೆಯಿಂದ ಇಂಗ್ಲೆಂಡಿಗೆ ಹೋಗುವ ಹಡಗುಗಳು ಗಂಗಾಜಲವನ್ನು ತುಂಬಿಕೊಂಡು ಹೋಗುತ್ತವೆ ; ಗಮ್ಯಸ್ಥಾನವನ್ನು ತಲಪುವವರೆಗೂ ಹಡಗಿನ ವಂಗೆ ಕ.ಡಿಯ ಲು ಅಧಾರವು ಈ ನೀರೇ : ಗಂಗಾಜಲವು ಕೆಡುವುದಿಲ್ಲ.

ಲಂಡನ್ನಿನಿಂದ ಹೊಂಡುವೆ ಸಡಗುಗಳು ಅಲ್ಲೀ ಥೇಮ್ಸ್ ನದಿಯಲ್ಲಿ ನೀರು ತೆಗೆದುಕೊಳ್ಳುತ್ತವೆ ; ಆದರೆ ಆ ನೀರು ವ ಧ್ಯದಲ್ಲಿಯೇ ದುರ್ವಾಸನೆ ಹೊ ಡೆಯುತ್ತದೆ. ಆದರಿಂದ ದಾರಿಯಲ್ಲಿ ಸಹುದ್ ರೇವಿನಲ್ಲಿಯೋ, ಏಡನ್ನಲ್ಲಿ ಯೋ ಆ ನೀರನ್ನು ಬಿಸ ಟು ಬೇರೇ ನೀರನ್ನು ತುಂಬಿಕೊಳ್ಳುತ್ತವೆ.

ಈ ವಿಷಯವನ್ನು ಡಾ || ನೆಲ್ಸ್ಕಿ ಕಂಡು ಮತ್ತೆ ಕೆಲವು ಮಂದಿ ಶಾಸ್ತ್ರ ಜ್ಞರೊಂದಿಗೆ ಎಲ್ಲಾ ಖಂಡಗಳ ನದಿಗಳ ನೀರನ್ನು ಗಂಗೆಯೊಂದಿಗೆ ಹೋ ಲಿ ಸಿ ನೋಡಿದನು. ಎಲ್ಲಾ ನದಿಗಳ ನೀರೂ ಕೆಲವು ದಿನಗಳಲ್ಲಿ ಕೆಟ್ಟುಹೋಯಿತು. ಗಂಗಾಜಲವು ಪಾತ್ರ ಎಷ್ಟು ಕಾಲವಾದರೂ ಕೆಡದೆ ಪರಿಶುಭ್ರವಾಗಿಯೇ ಕಂಡುಬಂದಿತು. ಚರಿತ್ರಕಾರರೂ, ವಿದೇಶೀಯರೂ ತಿಳಿಸಿರುವ ವಿಷಯವನ್ನು ಶಾಸ್ತ್ರಜ್ಞರು ಪ್ರತ್ಯಕ್ಷವಾಗಿ ಪರಿಶೋಧನೆಗಳ ಮೂಲಕ ತಿಳಿದುಕೊಂಡರು. ಹಿಂದೂಗಳು ಗಂಗೆಯನ್ನು ಪೂಜಿಸುವದು ಮೂಢವಿಶ್ವಾಸವಲ್ಲವೆಂದು ಅಭಿಪ್ರಾ ಯಕ್ಕೆ ಬಂದರು

50 ವರ್ಷಗಳ ಹಿಂದೆ, ಕಾಶಿಯಲ್ಲಿ ಕಾಲರಾ ವ್ಯಾಧಿಯು ಹಂಡಿದಾಗ ಆಗಿನ ಇಂಡಿಯಾ ಸರಕಾರವು ಗಂಗಾಜಲ ಪಾನವೇ ಕಾರಣವೆಂದು ಅಂದು ಕೊಂಡಿತು ; ಪೇಶ್ವರ್ ಇನ್ಸ್ಟಿಟ್ಯೂಟಿನಲ್ಲಿ ಬುದ್ಧಿವಂತನಾಗಿ ಭಾವಿಸಲ್ಪಟ್ಟಿದ್ದ ಡಾಕ್ಟರಿಗೆ ಆಹ್ವಾನ ಕಳುಹಿಸಿ ಈ ವಿಷಯದಲ್ಲಿ ನಿಶ್ಚಯವನ್ನು ತಿಳಿಸಲು ಕೇಳಿ ದಾಗ ಅತನು ಗಂಗಾಜಲವನ್ನು ಪರೀಕ್ಷಿಸಿ ಬಂದು ಸೊಲಿಗೆಯ ನೀ ರಿ ನ ಲ್ಲಿ 5–6 ಕಾಲಿರ ಟ್ಟಿಫಾಯಿಡ್, ಕಾಲರಾ ಮೊದಲಾದ ಕ್ರಿಮಿಗಳನ್ನು ಹಾಕಿಡಲು, 3 ಗಂಟೆಗಳೊಳಗಾಗಿ ಅವೆಲ್ಲವೂ ನಾಶವಾಗಿ ಜಲವು ವಿಷವಿಲ್ಲದೆ ಯ ಥಾರ್ಥ ಯಾಗಿದ್ದುವಿಕೆಯು ಕಂಡುಬಂದಿತು ಆ ಫ್ರೆಂಚ್ ಶಾಸ್ತ್ರಜ್ಞನು ಯೂರೋ ಪು ಖಂಡದಿಂದ ಪಶ್ಚಾಖಂಡಕ್ಕೆ ಒಂದಿದ್ದಕ್ಕೆ ಗಂಗೆಯ ಮಹತ್ವವು ತಿಳಿಯಿತೆಂ ದೂ, ತನ್ನ ಜನ್ಮವು ಸಾರ್ಥಕವಾಯಿತೆಂದೂ ಅರಿತು ಗಂಗೆಯಲ್ಲಿ ಮಿಂದು; ಹೊಟ್ಟೆತುಂಬಾ ಕುಡಿದು, ಆ ನೀರನ್ನು ತನ್ನ ಮನೆಗೂ ತೆಗೆದುಕೊಂಡು ಹೋದನು.

'ಡಿಫೆರಿಲ್ಲೀ' ಎಂಬ ಫ್ರೆಂಚು ಶಾಸ್ತ್ರಜ್ಞನು ಹೀಗೆ ಹೇಳಿದ್ದಾನೆ— ಕಾಲರಾ, ರಕ್ತಗ್ರಹಣಿ ಮೊದಲಾದ ವ್ಯಾಧಿಗಳಿಂದ ಮಡಿಹೊಂದಿದವರ ಶವ ಗಳು ನದಿಯಲ್ಲಿ ತೇಲಿಹೋದುಕೊಂಡು ಹೋಗುತ್ತಿರುವುದನ್ನು ಸ್ವತಃ ಕಂಡೆ ; ಆ ಶವಗಳು ತೇಲಾಡುವ ಸ್ಥಳದಲ್ಲಿ ಕೋಟಿಗಟ್ಟಲೆ ಕ್ರಿಮಿಗಳಿರಬಹುದೆಂದು ಅಂದು ಕೊಂಡೆ ಶವಗಳ ಕೆಳಗೆ ಎಂಡು ಅಡಿಗಳಲ್ಲಿಯು ನೀರನ್ನು ತೆಗೆದು ಪರೀಕ್ಷಿಸಿದೆ ; ಹೆಸರಿಗಾದರೂ ಒಂದು ಕ್ರಿಮಿಯಾದರೂ ಕಾಣಬರಲಿಲ್ಲ ಕಾಲರಾವ್ಯಾಧಿಗ್ರಸ್ಥ ರಿಂದ ಹೊಂದುವ ಕ್ರಿಮಿಗಳನ್ನು ಗಂಗಾಜಲದಲ್ಲಿ ಹಾಕಿದೆ ; ಸ್ವಲ್ಪ ಹೊತ್ತಿನ ಲ್ಲಿಯೇ ಅವು ಮಾಯವಾದವು : ಗಂಗಾಜಲದ ನೈರ್ಮಲ್ಯಶಕ್ತಿಗೆ ಯಾವ ಭಾಧೆ ಯೂ ಉಂಟಾಗಲಿಲ್ಲ

ಇದಕ್ಕೆ ಸರಿಯಾದ ಕಾರಣವನ್ನು ಶಾಸ್ತ್ರಜ್ಞನೂ ಹೇಳಿರುವುದಿಲ್ಲವೆಂದು ಕೆನಡಾ ದೇಶದ ಮ್ಯಾಕ್ಡೊನಾಲ್ಡ್ ಕಾಲೇಜು ಪ್ರಿನ್ಸಿಪಾಲ್ ಡಾ || ಹ್ಯಾರಿಸ್ ಹೇಳಿರುವರು : ಅತನು ಕೂಡ ಪರಿಶೋಧನೆಗಳನ್ನು ಮಾಡಿ ಗಂಗೆಯ ನೀರಿನಲ್ಲಿ ಕ್ರಿಮಿಗಳು ಸತ್ತುಹೋಗುವುದನ್ನು ಕಂಡನು.

ಇದರಿಂದ ಗಂಗಾಜಲವು ಔಷಧರೂಪವಾದುದೆಂಬುದು ಸಿದ್ಧವಾಯಿತು ; ಗಂಗೆಗೆ ಉಂಟುಮೋಷವಿಲ್ಲ ; ಇದಕ್ಕಾಗಿಯೇ ಗಂಗಾಜಲವನ್ನು ಯಾರು ಕೊ ಟ್ಟರೂ ಕುಡಿಯಬಹುದು : ಮನೆಗಳಿಗೆ ತೆಗೆದುಕೊಂಡುಹೋಗಿ ಅವಶ್ಯಬಂದಾಗ ಉಪಯೋಗಿಸಬಹುದು ; ಎಲ್ಲಾ ದೋಷಗಳನ್ನು ಹರಿಸುವಳು ಗಂಗಾಮಾತೆ.

(ಅ.ಸ)

ಉಡ್‌ಲಾಂಡ್

— 5 ನೇ ವಾರ —

Nagina

ನಗೀನಾ

— ಪಾತ್ರ —

ನೂರ್ಜ, ನಾಸಿರ್ ಖಾನ್, ಗೋಪ್

ನಗೀನಾ ಚಿತ್ರದೊಂದಿಗೆ

ಹಜ್ ಅಥವ ಮೆಕ್ಕಾಯಾತ್ರೆ

ಚಿತ್ರವು ಪ್ರದರ್ಶಿಸಲಾಗುತ್ತಿದೆ

ರಣಜಿತ್

3–8–51 ರಿಂದ

ಸಲೋಚನ ಚಟರ್ಜಿ, ಪ್ರೇಮ್ ಅದಿಬ್

ಕಕ್ಕೂ ನಟಿಸಿರುವ

ಹೃದಯಂಗಮ ಹಿಂದಿ ಚಿತ್ರ

ಪ್ರೀತ್ ಕಾ ಗೀತ್

Preet ka Geet

= **OPERA** =

Aug. 2nd

Pygmy Island

Starring —

Johnny Weissmuller,

Ann Savage, David Bruce.

August 7th

Out Door Action Drama

The Showdown

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ

ಉದಾರಾಶ್ರಯದಲ್ಲಿ ಪ್ರಕಟವಾಗುವ

- ಪ್ರಬೋಧ -

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1–14–0

City Municipal Office

Mysore, Dated 1st August 1951

Notification

Notice is hereby given to the inhabitants of the Municipality of Mysore City that the Municipal Council desire to frame bye-laws under Section 51 (1) (b) (iii) and Section 181 of the Mysore City Municipalities Act 1933 for the control of the trade of tanneries including taxidermy where one or all the processes of cleaning and preparing hides and skins are involved. The details of the bye-laws are published on page 88 of the Official Gazette Part III Section 3 dated July 12, 1951.

Any inhabitant of the Municipality objecting to the proposed bye-laws may, within one month from the date of publication of this notice, send his objection in writing to the undersigned.

(Sd) M. S. Swaminathan

Municipal Commissioner

Edited, Printed and Published by M. S. Krishna Rao, at the Satyavadi Press Chamarajpuram Mysore